INDIAN STREAMS RESEARCH JOURNAL
ISSN NO : 2230-7850
IMPACT FACTOR : 5.1651 (UIF)
VOLUME - 14 | ISSUE - 10 | NOVEMBER – 2024

# ಮಹಿಳೆ ಮತ್ತು ಸಾಂಸ್ಕೃತಿಕ ತಲ್ಲಣಗಳು

ಡಾ. ಗೀತಾಂಜಲಿ ಎಂ. ಕುರುಡಗಿ
ಬೋಧನಾ ಸಹಾಯಕರು
ಹಾವೇರಿ ವಿಶ್ವವಿದ್ಯಾಲಯ, ಹಾವೇರಿ.



ಸಂಸ್ಕೃತಿ ಎಂಬುದು ಮೂಲತಃ ಬಹುರೂಪಿಯಾಗಿರುವಂಥದ್ದು. ನಿರ್ದಿಷ್ಟ ಜನಾಂಗದ ಭಾಷೆ, ಚರಿತ್ರೆ, ಜ್ಞಾನ, ಜೀವನದೃಷ್ಟಿ ಇವೆಲ್ಲವು ಒಟ್ಟಾಗಿ ಸಂಸ್ಕೃತಿಯ ರೂಪದಲ್ಲಿ ವ್ಯಾಖ್ಯಾನಕ್ಕೆ ಒಳಗಾಗುತ್ತದೆ. “ಕಾಲದ ನಿರಂತರತೆ ಸಂಸ್ಕೃತಿಯನ್ನು ಒಡೆದು, ಕೂಡಿಸಿ, ಬೆರೆಸಿ ಕಟ್ಟುತ್ತದೆ. ಹಾಗಾಗಿಯೇ ಸಂಸ್ಕೃತಿ ಎನ್ನುವುದು ಆಕ್ರಮಣ ಮತ್ತು ಪ್ರತಿರೋಧಗಳಿಂದ ನಿರೂಪಿತಗೊಂಡಿರುವ ಜೀವನಕ್ರಮ.”[1]

ಹಾಗಾದರೆ ಜಾಗತೀಕರಣದ ಈ ಸಂದರ್ಭದಲ್ಲಿ ಮಹಿಳೆಯ ಸ್ಥಾನಮಾನ, ಅವಳನ್ನು ಸಮಾಜ ನೋಡುವ ಬಗೆ, ಅವಳಲ್ಲಾಗುತ್ತಿರುವ ಸಾಂಸ್ಕೃತಿಕ ತಲ್ಲಣಗಳ ಕುರಿತುಇಲ್ಲಿ ಸೂಕ್ಷ್ಮವಾಗಿ ಅವಲೋಕಿಸುವ ಒಂದು ಸಣ್ಣ ಪ್ರಯತ್ನಇಲ್ಲಿದೆ.

ನಮ್ಮ ಸಾಮಾಜಿಕ ಮತ್ತು ಸಾಂಸ್ಕೃತಿಕ ವ್ಯವಸ್ಥೆ ಮಹಿಳೆಯನ್ನು ಗೃಹಿಣಿ ಎಂದೇ ಪರಿಗಣಿಸಿಕೊಂಡು ಬಂದಿದೆ. ಅವಳ ಶ್ರಮ ಮತ್ತು ದುಡಿಮೆ ಬಹುಪಾಲು ಮನೆಯ ಒಳಗಿನ ವ್ಯವಹಾರಗಳಿಗೆ ಸಂಬಂಧಿಸಿದ್ದು. ಅಂದರೆ ಕುಟುಂಬದ ಚೌಕಟ್ಟು ಅವಳ ಕಾರ್ಯಕ್ಷೇತ್ರ ಪುರುಷ ಹುಟ್ಟಿನಿಂದ ಮೇಲು ಆಳುವವನು. ಮಹಿಳೆ ಹುಟ್ಟಿನಿಂದ ಕೀಳು, ಆಳಿಸಿಕೊಳ್ಳುವವಳು ಎಂಬ ತಿಳುವಳಿಕೆಯ ಮೇಲೆಯೇ ಬೆಳೆದು ಬಂದ ನಮ್ಮದೆಂಬ ಸಂಸ್ಕೃತಿಯ ಮೌಲ್ಯಗಳ ನಂಬಿಕೆಯ ಮೇಲೆಯೇ ಕುಟುಂಬ ಜೀವನ ಈಗಲೂ ನಡೆದುಕೊಂಡು ಬಂದಿದೆ.

ಅದೇನೇ ಇರಲಿ ಸ್ತ್ರೀಪುರುಷ ಅಸಮಾನತೆಯ ಸಂಘರ್ಷ ಶತಶತಮಾನಗಳಿಂದಲೂ ನಡೆಯುತ್ತಲೇ ಬಂದಿದೆಯಾದರೂ ಬಹುಮಟ್ಟಿಗೆ ಪುರುಷನೇ ಮೇಲುಗೈ ಪಡೆದಿದ್ದಾನೆಯೇ ಹೊರತು ಹೆಣ್ಣಿಗೆ ದೊರೆತಿರುವ ವಿಜಯದ ಗಳಿಗೆಗಳು ತೀರಾಕಡಿಮೆ. ಆದರೆ ಇಂದಿನ ದುಸ್ಥಿತಿಯಲ್ಲಿ ಸಾಕಷ್ಟು ಬದಲಾವಣೆಯಾಗಿದೆ. ಮಹಿಳೆ ಇಂದುತನ್ನ ಸ್ಥಿತಿಯ ಬಗ್ಗೆ ಜಾಗೃತಳಾಗಿದ್ದಾಳೆ. ತನ್ನ ಬದುಕನ್ನು ಕುರಿತಂತೆ ಸ್ವತಂತ್ರವಾಗಿ ಚಿಂತನೆ ನಡೆಸಿದ್ದಾಳೆ. ತನ್ನನ್ನು ಸುತ್ತುವರೆದಿರುವ ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಡುವಛಲವನ್ನು ಮೈಗೂಡಿಸಿಕೊಂಡಿದ್ದಾಳೆ. ‘ತಲೆ ತಲಾಂತರದಿಂದತಲೆಯೇ ಇಲ್ಲದವಳು’ ಎನಿಸಿಕೊಂಡ ಮಹಿಳೆ ಇಂದು ದೈಹಿಕವಾಗಿ, ಮಾನಸಿಕವಾಗಿ ಪುರುಷರ ಸಮಾನವಾಗಿತನ್ನ ಸಾಮರ್ಥ್ಯವನ್ನು ಪ್ರಕಟಪಡಿಸುತ್ತಿದ್ದಾಳೆ. ಹಾಗಿದ್ದ ಮಾತ್ರಕ್ಕೆ ಆ ಮಹಿಳೆ ಸಂಪೂರ್ಣವಾಗಿ ಪರಿಪೂರ್ಣಳಾದಳೇ ಎಂದರೆ ಇಲ್ಲವೆನ್ನ ಉತ್ತರ ವೇದೊರೆಯುತ್ತದೆ. ಸಿಕ್ಕಿರುವ ಅವಕಾಶವನ್ನು ಬಳಸಿಕೊಳ್ಳುವಲ್ಲಿ, ಹೊಸ ಜೀವನ ರೂಪಿಸಿಕೊಳ್ಳುವಲ್ಲಿ ಸಾಕಷ್ಟು ಜೀವನದುದ್ದಕ್ಕೂ ವೈಯಕ್ತಿಕ ಅನ್ಯಾಯ, ಸಾಮಾಜಿಕ, ಕೌಟುಂಬಿಕ ಅನ್ಯಾಯಗಳನ್ನು ಎದುರಿಸುತ್ತಲೇ ಮುನ್ನುಗ್ಗುತ್ತಿದ್ದಾಳೆ. ಈ ಸಂದರ್ಭದಲ್ಲಿ ಮಹಾತ್ಮಾ ಗಾಂಧೀಜಿಯವರ ಒಂದು ಮಾತನ್ನು ಇಲ್ಲಿ ಉಲ್ಲೇಖಿಸಬಹುದು “ಮಹಿಳೆಯರಿಗೆ ಖಡ್ಗದ ಉಪಯೋಗವನ್ನು ಕಲಿಸುವುದಕ್ಕಿಂತಲೂ ಅವರು ನಿರ್ಭೀತರಾಗಿರುವುದನ್ನು ಕಲಿಸುವುದೇ ಮೇಲು” ಎಂದದ್ದು. ವಾಸ್ತವವಾಗಿ ಇಂದಿನ ಪ್ರಸಂಗಕ್ಕೆ ಅನ್ವಯಿಸಬಹುದು.

ಇಂದಿನ ಮಹಿಳೆಯರ ಹಕ್ಕು ಹೋರಾಟದ ಮುಖ್ಯ ಗುರಿಯಾಗಿ ಲಿಂಗಾಧಾರಿತ, ಪರಂಪರಾಗತ, ಅಸಮಾನತೆ, ಆರ್ಥಿಕ ಸ್ವಾತಂತ್ರ್ಯ ಹೀಗೆ ಅವಳ ಸಾಂಸ್ಕೃತಿಕ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವ, ಪ್ರಶ್ನಿಸುವ, ನಿರಾಕರಿಸುವ ಸ್ತ್ರೀ ಮಾದರಿಗಳು ನಮ್ಮ ಸಂಸ್ಕೃತಿ ಚಿಂತನೆಯ ಕಾಳಜಿಗಳಾಗಿವೆ.

---

[1] ‘ಮಹಿಳೆ ಶೋಷಣೆ – ಸವಾಲುಗಳು’ –ಡಾ.ವಿಜಯಶ್ರೀ ಸಬರದ, ಪು.ಸಂ. 153. (ಪ್ರ. ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, 2005.)

ಈ ನೆಲೆಯಲ್ಲಿ ಸಾಕಷ್ಟು ಸಾಂಸ್ಕೃತಿಕ ತಲ್ಲಣಗಳನ್ನು ಅನುಭವಿಸುವ ಮಹಿಳೆಯರ ಅಸಹಾಯಕತೆಯನ್ನು ಶ್ರೀಮತಿ ಪ್ರತಿಭಾ ನಂದಕುಮಾರವರು ತಮ್ಮ ಒಂದು ಪದ್ಯದಲ್ಲಿ ಹೀಗೆ ಹೇಳುತ್ತಾರೆ–

**"ನನಗೆ ಅದೂ ಮನೆಯಲ್ಲ**
**ಇದೂ ಮನೆಯಲ್ಲ**
**ನನ್ನದೊಂದು ಮನೆಯೇಇಲ್ಲ**
**ಆದರೂಇದನ್ನು ಬಿಟ್ಟು ಹೋದರೆ**
**'ಮನೆಯ ಮಾನ' ಕಳೆಯುವ ಹೆದರಿಕೆ**
**ಹಾಗಾಗಿ ಇದ್ದಲ್ಲೇ ಇರುತ್ತೇನೆ**
**ಹಾಗೆ ಕೆಸರೊಳಗೆ ಮುಳುಗುತ್ತಾ**
**ಕೊನೆಗೊಮ್ಮೆ ಇಲ್ಲವಾಗುತ್ತೇನೆ"**

ಈ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣು ಹುಟ್ಟಿದ ಮನೆ ಬಿಟ್ಟು ಮುಂದೆ ಸಿಗುವಂತಹ ಮನೆಗಳಲ್ಲಿಯೇ ಇದ್ದು ಸದ್ದಿಲ್ಲದೆ ಇಲ್ಲವಾಗಬೇಕು ಎಂಬ ನೀತಿಗಂಡು ಹೆಣ್ಣಿಗೆ ನೀಡಿರುವ ಸ್ಥಾನದ ವಿಪರ್ಯಾಸವನ್ನುಎತ್ತಿತೋರಿಸುತ್ತದೆ.

ಕವಯತ್ರಿ ಸಿಂಧು ಹೆಗಡೆ ತಮ್ಮ 'ವಜ್ಜೆ' ಕವನದಲ್ಲಿ ಮಹಿಳೆಯ ಅಸ್ತಿತ್ವ ಸಾಂಸ್ಕೃತಿಕ ಸಂಘರ್ಷಕ್ಕೆ ಸಿಕ್ಕು ನಲುಗುತ್ತಿರುವುದನ್ನುತುಂಬಾ ಮಾರ್ಮಿಕವಾಗಿ ಹೇಳುತ್ತಾರೆ–

**"ಅಂದಿನಷ್ಟು ನನ್ನ ಹೆಜ್ಜೆಗಳು**
**ಚುರುಕಾಗಿಲ್ಲಇಂದು**
**ಕಾಲುಂಗರಕಚ್ಚುತ್ತಿರಬೇಕು !**
**ನಿನ್ನೆಯಷ್ಟು ನನ್ನ ಕೈಗಳು**
**ಗೀಚುವುದಿಲ್ಲ ಇಂದು**
**ಬಳೆಗಳ ಕಿರಿಕಿರಿಯಿರಬೇಕು**
**ಕುತ್ತಿಗೆಯೂ ನೆಟ್ಟಗೆ ದಿಟ್ಟವಾಗಿಲ್ಲವಲ್ಲ ?**
**ಕರಿಮಣಿಗಳ ವಜ್ಜೆಗಲ್ಲವಷ್ಟೇ ?"**

ಪ್ರಸ್ತುತ ಕಾಲಮಾನದಲ್ಲಿ ಮಹಿಳೆ ತನ್ನ ಅಸ್ಮಿತೆ ಮತ್ತು ಸಂವೇದನೆಯನ್ನು ಹುಡುಕಿಕೊಳ್ಳಲು ಹರಸಾಹಸ ಪಡಬೇಕಾದ ಪರಿಸ್ಥಿತಿ ಇದೆ. ಸಮಾಜದಲ್ಲಿ ಸ್ವಾಸ್ಥ್ಯ ಕಾಪಾಡುವ ಮಾತು ಬಂದಾಗ ಮಹಿಳೆಯರ ಬದುಕಿನಕಡೆಗೆ ದೃಷ್ಟಿ ಹರಿಸಿ ಮಾತನಾಡುವವರ ಸಂಖ್ಯೆಯೇ ಜಾಸ್ತಿ. ಆಕೆಯು ಉಡುವ, ತೊಡುವ, ತಿನ್ನುವ ತಿನಿಸುಗಳಿಂದ ಹಿಡಿದು ಆಕೆಯ ದೈನಂದಿನ ಎಲ್ಲ ವರ್ತನೆಗಳು ಸಮಾಜದ ಸಂಸ್ಕೃತಿಗೆ, ಸುಸ್ಥಿತಿಗೆ ಪ್ರತೀಕವಾಗಿಯೇ ಇರಬೇಕೆಂಬ ಭಾವನೆ. ಈ ಭಾವನೆಗೆ ಸ್ವಲ್ಪವೇಧಕ್ಕೆಯಾಗುವಂತೆ ನಡೆದುಕೊಂಡಳೆಂದರೆ ಆಕೆಯನ್ನು ಕೀಳಾಗಿ ಕಾಣುವ ಹಲ್ಲೆ ನಡೆಸುವ ಪ್ರವೃತ್ತಿಯ ವಾತಾವರಣಕ್ಕೆ ತಿರುಗಿ ಬಿಡುತ್ತದೆ.

ಇಂತಹ ಅನೇಕ ಘಟನೆಗಳನ್ನು ಇಲ್ಲಿ ಉಲ್ಲೇಖಿಸುವುದಾದರೆ

* ದೀಪಿಕಾ ಪಡುಕೋಣೆ ಪ್ರಸ್ತುತ ಪಡಿಸಿದ 'ಮೈಚಾಯ್ಸ್' ಎನ್ನುವ ವಿಡಿಯೋ
* ಬಾಲಿವುಡ್ ನಟಿ ಬಿಪಾಶಾ ಬಸು ಪತ್ರಕರ್ತರ ಎದುರಿಗೆ ಸೀರೆ ಉಡಲು ಬರುವುದಿಲ್ಲವೆಂಬ ಹೇಳಿಕೆ
* ಸ್ತ್ರೀಯರು ಶಬರಿಮಲೈ ಹಾಗೂ ಶನಿಸಿಂಗ್ನಾಪುರಗಳ ದೇವಾಲಯಗಳ ಪ್ರವೇಶಿಸುವಂತಿಲ್ಲ ಎನ್ನುವುದನ್ನು ಧಿಕ್ಕರಿಸಿ ನಡೆದದ್ದು
* ಮುಸ್ಲಿಂ ಮಹಿಳೆಯರ ಬುರ್ಖಾ ವಿವಾದ

ಹೀಗೆ ಮಹಿಳೆಯರ ಧರ್ಮ, ಜಾತಿ, ಪುರುಷರಾಜಕಾರಣ ನಿಯಂತ್ರಿಸಲು ಹೆಣಗಾಡುತ್ತವೆ. ಅದಕ್ಕೆ ಬಗ್ಗದಿದ್ದಾಗ ದೈಹಿಕವಾಗಿ ದಾಳಿ ನಡೆಸುವ ಮೂಲಕ ನಿಯಂತ್ರಿಸಲು ತೊಡಗುತ್ತಿರುವದು ದುರಂತ.

ಪ್ರಸ್ತುತ ಕೋವಿಡ್–೧೯ ಮಹಾ ವೈರಸ್‌ನ ದಾಳಿಯಿಂದ ಮಹಿಳೆಯರ ಬದುಕು ಇನ್ನಷ್ಟು ದುಸ್ತರವಾಗಿದೆ. 'ಮನೆ–ಗಂಡ–ಮಕ್ಕಳು' ಎನ್ನುತ್ತ ನಾಲ್ಕು ಗೋಡೆಯಲ್ಲಿ ಬದುಕು ಸವೆಸುವ ಅನಿವಾರ್ಯತೆ ಸೃಷ್ಟಿಯಾಗಿ ಮನೆ ಮತ್ತು ಹೊರಗಿನ ಕೆಲಸದ ಒತ್ತಡವನ್ನು ಏಕಕಾಲಕ್ಕೆ ನಿಭಾಯಿಸುತ್ತತನ್ನ ಅಸ್ತಿತ್ವವನ್ನೇ ಸಾಬೀತು ಪಡಿಸಲು ಹೆಣಗಾಡುತ್ತಿದ್ದಾಳೆ.ಈ ಸಮಾಜದ ಸಾಂಸ್ಕೃತಿಕ ಜವಾಬ್ದಾರಿಗಳ ನಡುವೆ ತಲ್ಲಣಗೊಳ್ಳುತ್ತಿದ್ದಾಳೆ.ಇದನ್ನು ಮಹಿಳೆಯರು ದಿಟ್ಟತನದಿಂದ ಎದುರಿಸಬೇಕಾದ ಸವಾಲುಗಳು ಅವಳ

ಮುಂದೆ ಇವೆ. ಇದನ್ನು ಹೆಣ್ಣು ಗಂಡು ಆದಿಯಾಗಿ ಸಮಗ್ರ ಲೋಕದ ಬಿಡುಗಡೆ ಹಾದಿಯಾಗಿ ಪರಿವರ್ತಿಸಿಕೊಳ್ಳುವುದು ತುಂಬಾ ಅವಶ್ಯಕವಾಗಿದೆ.

## ಆಧಾರಗ್ರಂಥಗಳು :

(೧) ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ– ವಿವಿಧ ಲೇಖಕರು, ಕರ್ನಾಟಕ ಸಾಹಿತ್ಯಅಕಾಡೆಮಿ, ಬೆಂಗಳೂರು, ೧೯೯೩.
(೨) ಸ್ತ್ರೀವಾದಿ ಚಿಂತನೆಗಳು – ಪ್ರೊ. ಕೇಶವಶರ್ಮ ಕೆ., ಸಂ:ಡಾ. ಹಾಮ ನಾಗಾರ್ಜುನ, ಪ್ರ: ದೇಸಿ ಪುಸ್ತಕ, ವಿಜಯ ಬೆಂಗಳೂರು, ೨೦೧೦.
(೩) ಮಹಿಳಾ ಸಾಹಿತ್ಯ – ಸಂ.ಡಾ.ಸಬೀಹಾ ಭೂಮಿಗೌಡ, ಕರ್ನಾಟಕ ಸಾಹಿತ್ಯಅಕಾಡೆಮಿ, ಬೆಂಗಳೂರು, ೨೦೦೬.